ಶ್ರೀ ಟಿ. ಎಚ್. ಮೂಡ್ಲಗಿರಿಗೌಡರು.—ಈ ರೀತಿಯಲ್ಲಿ ಯಾವಾವ ಜಿಲ್ಲೆಯಿಂದ ಎಷ್ಟೆಷ್ಟು ಬಂದಿದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಟಿ. ಹನುಮಯ್ಯನವರು (ಹಿರಿಯೂರು—ಅನುಸೂಚಿತ ಜಾತಿಗಳು).—ಹಳ್ಳೀ ಬಾವಿಗಳಿಗೆ ಹಣ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಬಾವಿ ತೆಗೆಯದೆ ಹಣ ತೆಗೆದುಕೊಂಡಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್. ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯನವರು.—ಬಾವಿಗಳಿಗಾಗಿ ಹಣವನ್ನು ಸರ್ಕಾರ ಒದಗಿಸುವುದು ಯಾವ ರೀತಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ಪ್ರಾರಂಭ ಮಾಡಿದ ಕೂಡಲೇ ಅರ್ಧ, ಪೂರ್ತಿಯಾದ ಮೇಲೆ ಇನ್ನರ್ಧ ಈ ರೀತಿ ಕೊಡಲಾಗುತ್ತದೆ.

ಶ್ರೀ ಟಿ. ಹನುಮಯ್ಯನವರು.—ಹಣ ಪಾವತಿಯಾಗುವುದಕ್ಕೆ ಮುಂಚೆಯೇ ಕೆಲಸ ಪ್ರಾರಂಭಿಸಬೇಕೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು.

ಶ್ರೀ ಟಿ. ಹನುಮಯ್ಯನವರು.—ಆ ರೀತಿ ಮಾಡದೆ ಜಾಗ್ರತೆ ಹಣ ಕೊಡಲು ಏರ್ಪಾಡು ಮಾಡಿ ನಾನು ತಿಳಿಸಿರುವ ಅಕ್ರಮದ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮವನ್ನು ತಕ್ಷಣ ತೆಗೆದುಕೊಳ್ಳಲಾಗುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಆ ವಿಷಯ ಗಮನಕ್ಕೆ ಬಂದರೆ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ. ರಾಚಯ್ಯನವರು (ಯಳಂದೂರು ಅನುಸೂಚಿತ ಜಾತಿಗಳು).—ಬಾವಿಯಲ್ಲಿ ನೀರು ಬರುವಷ್ಟು ಆಳಕ್ಕೆ ತೆಗೆಯಲು ಆಗದಿದ್ದರೆ ಹೆಚ್ಚು ಹಣ ಕೊಡಲಾಗುವುದೇ ?

Sri Kadidal MANJAPPA.—Please repeat the question.

ಶ್ರೀ ಬಿ. ರಾಚಯ್ಯನವರು.—ಈಗ ಮಂಜೂರುಮಾಡಿರುವ ಹಣ ಸಾಕಾಗದೇ ಇದ್ದರೆ ಹೆಚ್ಚು ಹಣ ಕೊಟ್ಟು ಕೆಲಸ ಪೂರೈಸಲು ಅವಕಾಶ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆಮಾಡಲಾಗುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿಯವರು (ಯಳಂದೂರು).—ಅಂಥ ಬಾವಿಗಳು ಯಾವುದಾದರೂ ಗಮನಕ್ಕೆ ಬಂದಿವೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

Sri S. SRINIVASA IYENGAR (T. Narsipur).— Have the Government planned for a lift Irrigation scheme this year ?

Sri Kadidal MANJAPPA.—Notice.

ಶ್ರೀ ವಿ. ಮಸಿಯಪ್ಪನವರು (ಹಿರಿಯೂರು).—ಯಾವ ಭಾಗದಲ್ಲಿ ಬಾವಿತೆಗೆಯುವುದು ಉತ್ತಮವೆಂದು ಸಲಹೆ ಕೊಡಲು ವ್ಯವಸ್ಥೆಯಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆ ಮಾಡೋಣ.

Mutation Cases Pending.

Q.—410. Sri N. HUCHMASTHY GOWDA (Huliyurdurga).—

Will the Government be pleased to state :—

(*a*) when the Record of Rights was introduced in Mysore State ;

(*b*) the object with which it was introduced ;

(*c*) the number of cases still pending in respect of which mutation fee has been collected (information to be kindly given talukwar) ?

A.—Sri Kadidal MANJAPPA (Minister for Revenue and Public Works).—

(*a*) On the 13th April 1927, when the Record of Rights Act X of 1927 was passed.

(*b*) The Record of Rights Scheme was introduced into Mysore State with a view to checking litigation in regard to land and facilitating its disposal by the Courts, reducing unnecessary expenditure by the raiyats in executing and registering documents and protecting them against fraud and fabrication of false claims. It is also of assistance to Government as well as the raiyats in the distribution of assessment among the various hissedars, the grant of Takavi and Land Improvement Loans and the grant of suspension or remission of Land Revenue.

(*c*) Statement appended below.

MUTATION CASES PENDING ON 1ST APRIL 1952.

Bangalore District.—

Bangalore North Taluk	...	2,669
Bangalore South Taluk	...	4,114
Hosakote	...	316
Dodballapur	...	1,033
Nelamangala	...	2,904
Kanakapura	...	293
Magadi	...	11,041
Channapatna	...	4,189
Anekal	...	1,250
Devanahalli	...	1,571
Ramanagaram	...	4,922

Kolar District.—

Kolar	...	3,058
Bangarpet	...	4,994
Chintamani	...	1,234
Mulbagal	...	326
Sidlaghatta	...	802
Chikballapur	...	2,961
Bagepalli	...	145
Goribidnur	...	89
Malur	...	1,010
Srinivasapur	...	138
Gudibanda	...	184

Tumkur District.—

Tumkur	...	4,124
Madhugiri	...	3,285
Chiknayakanhalli	...	2,772
Sira	...	619
Gubbi	...	654
Tiptur	...	2,615
Pavagada	...	713
Kunigal	...	16,631
Kortagere	...	2,216
Turuvakere	...	1,048

Mysore District—

Mysore	...	502
Chamarajanagar	...	300
Hunsur	...	97
Krishnarajanagar	...	7,951
Heggaddevanakote	...	1,155
Gundlupet	...	331
Nanjangud	...	772
T.-Narasipur	...	556
Periyapatna	...	420

Mandya District.—

Mandya	...	1,789
Srirangapatna	...	1,185
Malvalli	...	7,149
Krishnarajpet	...	1,496
Nagamangala	...	754
Maddur	...	802
Pandavapura	...	1,092

Hassan District—

Hassan	...	1,455
Manjarabad	...	313
Arkalgud	...	834
Belur	...	280
Chennarayapatna	...	1,587
Arsikere	...	4,142
Hole-Narasipur	...	1,249
Alur	...	274

Shimoga District—

Shimoga	...	191
Channagiri	...	167
Honnali	...	128
Shikarpur	...	67
Sorab	...	35
Sagar	...	Nil
Nagar	...	54
Thirthahalli	...	58
Bhadravathi	...	159

Chikmagalur District—

Chikmagalur	...	1,256
Kadur	...	346
Tarikere	..	180
Koppa	...	124
Mudigere	...	18
Narasimharajapura	...	Nil

Chitaldrug District—

Chitaldrug	...	414
Challakere	...	98
Hiriyur	...	265
Holalkere	...	56
Davangere	...	158
Molakalmuru	...	127
Jagalur	...	179
Hosadurga	...	85
Harihar	...	190

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಸಾವಿರಾರು ಕೇಸುಗಳು ಫೈಸಲಾಗದೇಯಿರುವುದರಿಂದ ಸರ್ಕಾರದ ಉದ್ದೇಶ ಭಂಗವಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಹಾಗಾಗುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಯಾವಕಾರಣದಿಂದ ಫೈಸಲಾಗುವುದು ನಿಧಾನವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೋರ್ಟಿನಲ್ಲಿ ನಿಧಾನವಾದ ಮಾತ್ರಕ್ಕೇ ಉದ್ದೇಶ ಭಂಗವಾಯಿತೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ತರಹ ಇತ್ಯರ್ಥವಾಗುವುದು ಜಾಸ್ತಿಯಾಗಿದ್ದುದರಿಂದ ಸರ್ಕಾರದ ಉದ್ದೇಶಕ್ಕೆ ಭಂಗ ಬರುತ್ತದೆಯೆಂದು ಮಾನ್ಯ ಮಂತ್ರಿಗಳು ಸದಸ್ಯರಾಗಿದ್ದಾಗ ಹಿಂದೆ ಬಹಳವಾಗಿ ಪ್ರಶ್ನೆ ಮಾಡಿರುವುದು ಅವರ ಜ್ಞಾಪಕದಲ್ಲಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಜ್ಞಾಪಕವಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಕಡಮೆ ಸಂಖ್ಯೆಯ ಕೇಸುಗಳು ಇತ್ಯರ್ಥವಾಗದೆ ಉಳಿದಿವೆಯೆಂಬುದು ಗಮನಾರ್ಹವಾಗಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅದೇರೀತಿಯಲ್ಲಿ ಬಾಕಿ ಕಡೆಯೂ ನಿರ್ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಖಂಡಿತವಾಗಿ. ಇನ್ನು ಒಂದು ವರ್ಷದಲ್ಲಿ ಅದಷ್ಟು ಕಡಮೆ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗಾಗಲೇ ಹೆಚ್ಚು ಕೇಸುಗಳು ಉಳಿದಿರುವ ಕಡೆ ಬೇಗ ಇತ್ಯರ್ಥವಾಗಲು ಕಾರ್ಯಕ್ರಮ ತೆಗೆದುಕೊಂಡಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ತೆಗೆದುಕೊಂಡಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಎಲ್ಲೆಲ್ಲ ?

ಶ್ರೀ ಕಡಿದಾಳ್ ಮಂಜಪ್ಪನವರು.—ನಾನು ಹೋದ ಕಡೆಗಳಲ್ಲೆಲ್ಲಾ ಎಚ್ಚರಿಕೆ ಕೊಟ್ಟಿದ್ದೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಆ ರೀತಿ ಎಚ್ಚರಿಕೆ ಕೊಟ್ಟರುವುದು ಮಾತ್ರ ಈಗ ತೆಗೆದು ಕೊಂಡಿರುವ ಕಾರ್ಯಕ್ರಮವೊ ಅಥವಾ ಇನ್ನೇನಾದರೂ ವಿಶೇಷ ಸಿಬ್ಬಂದಿ ಇಡುವುದು ಮುಂತಾದ ಕಾರ್ಯಕ್ರಮವೇನಾದರೂ ಇದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾದ ತಿಳಿವಳಿಕೆ ಕೊಟ್ಟಿದೆ. ಸಿಬ್ಬಂದಿಯನ್ನು ಕೂಡ ಜಾಸ್ತಿ ಮಾಡಲಾಗಿದೆ.

Tanks constructed in Chikmagalur District.

Q.—443. Srimathi B. L. SUBBAMMA (Chikmagalur-Mudigere).—

Will the Government be pleased to state.—

the number of new tanks constructed in Chikmagalur District during the last four years ?

A.—Sri Kadidal MANJAPPA (Minister for Revenue and Public Works).—Nil.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—" ಕಳೆದ ನಾಲ್ಕು ವರ್ಷಗಳಿಂದಲೂ ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಹೊಸದಾಗಿ ಎಷ್ಟು ಕೆರೆಗಳು ನಿರ್ಮಿತವಾದುವು " ಎಂದು ಕೇಳಿರುವುದಕ್ಕೆ "ಯಾವುದೂ ಇಲ್ಲ" ಎಂದು ಹೇಳಿದೆ. ಹಾಗಾದರೆ ಇರಿಗೇಷನ್ ಫಂಡಿನಿಂದ ನಮ್ಮ ಜಿಲ್ಲೆಯಲ್ಲಿ ಏನೂ ಮಾಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ತಮ್ಮ ಜಿಲ್ಲೆಯಲ್ಲಿ ಮೈನರು ಸಂಸ್ಥಾನದಲ್ಲೇ ಅತಿ ದೊಡ್ಡದಾದ ನೀರಾವರಿ ಯೋಜನೆ ಕೈಗೆಕೊಂಡಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಎಲ್ಲಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ಲಕ್ಕವಳ್ಳಿಯಲ್ಲಿ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಆದರಿಂದ ಚಿಕ್ಕಮಗಳೂರು ಜಿಲ್ಲೆಗೆ ಅನುಕೂಲವಿಲ್ಲ. ಚಿತ್ರದುರ್ಗಕ್ಕೆ ಮಾತ್ರ ಅನುಕೂಲ ಎಂಬುದು ಗೊತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ವಲ್ಪಮಟ್ಟಿಗೆ ತಮ್ಮ ಜಿಲ್ಲೆಗೂ ಪ್ರಯೋಜನವಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಅದರಿಂದ ನರಸಿಂಹರಾಜಪುರದ ಬೈಲು ಮುಳುಗಿ ಹೋಗುತ್ತದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಭಾಗ ಹೋಗುತ್ತದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಹೊಸ ಕೆರೆ ಯಾವುದೂ ಮಾಡಿಲ್ಲ. ಹಳೇಕೆರೆಗಳನ್ನಾದರೂ ರಿಪೇರಿ ಮಾಡರಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಮಾಡಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಎಲ್ಲ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ರಿಪೇರಿ ಮಾಡಿರುವುದಕ್ಕೆ ಖರ್ಚಾಗಿರುವ ಹಣ ಸದ್ವಿನಿಯೋಗವಾಗಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀಮತಿ ಬಿ ಎಲ್. ಸುಬ್ಬಮ್ಮನವರು.—ಈಗರಾದರೂ ಹೆಚ್ಚು ನಿಗ ತೆಗೆದುಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಖಂಡಿತ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಇಂಜಿನಿಯರಿಂಗ್ ಇಲಾಖೆಯವರು ತಮ್ಮ ಕೆಲಸಕಾರ್ಯಗಳಲ್ಲ ನರಿಯಾಗಿ ನಿಗಾ ಇಡದಿರುವುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಅನೆ ಬಾಂದ್ಯರ್ ಮತ್ತು ನಿರಾಳದ ಹತ್ತಿರ ಒಂದು ಕೆರೆ ತಯಾರಾಗುತ್ತಿದೆ. ಅದಕ್ಕೆ ಯಾವ ಏಜನ್ಸಿಯಿದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಮಂಜೂರಾಗಿರುವುದು ಹಿಂದೆ. ಆ ತರಹ ಯಾವುದಾದರೂ ಇದ್ದರೆ ತಿಳಿಸಿ, ವಿಚಾರ ಮಾಡುತ್ತೇವೆ.

Sri D. VENKATESH.—Sir, questions 503 to 509 are all identical and I request that they may all be kindly ordered to be taken up together.

Mr. SPEAKER.—Yes. They may be taken up along with question No. 136.

Prosecutions for Infringement of the Factories Act, 1948.

Q.—136. Sri D. VENKATESH (Gandhinagar).—

Will the Government be pleased to state :—

(a) the number of prosecutions launched for infringement of the Factories Act, 1948, since the time it came into effect;